ಶ್ರೀ ಎಂ. ರಾಜಶೇಖರ ಮೂರ್ತಿ.—ಕಂಪನಿಗೆ ಪ್ರಾಫಿಟ್ ಕಡಿಮೆಯೆಂದರೆ ಷೇರು ಮಾರು ಕಟ್ಟೆಯಲ್ಲಿ ಷೇರು ಬೆಲೆ ಕಡಿಮೆಯಾಗುತ್ತದೆ.

ಶ್ರೀ ದೊಡ್ಡಬೊರೇ ಗೌಡ.—ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಅದಕ್ಕೆ ಉತ್ತರ ಕೊಡಿಸ ಬೇಕು. 1962 ರಿಂದ ಅಲ್ಲಿ ಭ್ರಷ್ಟಾಚಾರ ನಡೆದಿದೆ. * * * *

ಶ್ರೀ ಕೆ. ಪುಟ್ಟಸ್ವಾಮಿ.—ಈ ಪ್ರಶ್ನೆಗೆ ಹೆಚ್ಚಿಗೆ ವಿವರಗಳನ್ನು ಮಾನ್ಯ ಸದಸ್ಯರು ಬಯಸು ವುದಾದರೆ ಅರ್ಧಗಂಟೆ ಕಾಲದ ಚರ್ಚೆಗೆ ಅವಕಾಶವಿದೆ. ಯಾರಾದರೂ ಸದಸ್ಯರು ಅಪೇಕ್ಷೆ ಪಟ್ಟರೆ ಅದನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ. ಆಗ ಚರ್ಚೆ ಮಾಡಬಹುದು.

ಶ್ರೀ ಎಂ. ಕೆ. ಬೊಮ್ಮೇ ಗೌಡ.—ಮ್ಯಾನೇಜ್‌ಮೆಂಟಿನವರು ಸರ್ಕಾರ ಕೊಟ್ಟಿದ್ದ ಜಮೀನಿ ನಲ್ಲಿ ಅರೇಳು ನೂರು ಎಕರೆಯನ್ನು ಮಾರುವುದಕ್ಕೆ ಕಾರಣವೇನು?

ಶ್ರೀ ಎಂ. ರಾಜಶೇಖರಮೂರ್ತಿ.—ಫಾರಂನಲ್ಲಿ ನಷ್ಟವಾಗುತ್ತಿತ್ತು. ಅದಕ್ಕೋಸ್ಕರ ಮಾರಿದ್ದಾರೆ.

(Several Members stood up to put supplementaries.)

Mr. SPEAKER.—If the Hon'ble Members give a notice for half-an-hour discussion on this question, I will permit it. Next Question.

Small Car Project

95. Sri SIDDAIAH KASHIMATH (Shirahatti).—

Will the Minister for Industries, Information and Publicity be pleased to state :—

(*a*) the number of applications received from entrepreneurs to start a small Car Project in the State ;

(*b*) the action taken thereon ?

A.—Sri M. RAJASEKHARA MURTHY (Minister for Industries, Information and Publicity).—

(*a*) Five.

(*b*) Out of the five applications the State Government have recommended the application of the Mysore State Industrial Investment and Development Corporation, Limited to the Government of India for the grant of an industrial licence.

ಶ್ರೀ ಸಿದ್ದಯ್ಯ ಕಾಶೀಮಠ.—ಸಣ್ಣ ಕಾರು ಯೋಜನೆ ಬಗ್ಗೆ ಈಗಾಗಲೇ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಸಿಫಾರಸು ಮಾಡಲಾಗಿದೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದ ಅದಕ್ಕೆ ಏನಾದರೂ ಉತ್ತರ ಬಂದಿದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಕೇಂದ್ರ ಸರ್ಕಾರ ಯಾವ ಆಜ್ಞೆಯನ್ನು ತೀರ್ಮಾನವನ್ನೂ ತೆಗೆದುಕೊಂಡಿಲ್ಲ. ಒಂದು ವಾರದ ಹಿಂದೆ ಬಂದಿದ್ದ ಪ್ರೆಸ್ ರಿಪೋರ್ಟನ್ನು ಮಾನ್ಯ ಸದಸ್ಯರು ನೋಡಿರಬಹುದು. The report is that Government have taken the decision to take up this small Car project and that matter has been disclosed to the consultative committee. It appears that the concerned Ministry is going to move the Planning Commission to include it in the fourth five year plan.

**** Matter not recorded as ordered by the Chair.

ಶ್ರೀ ಸಿದ್ಧಯ್ಯ ಕಾಶೀಮಠ.—ರಾಜ್ಯದಲ್ಲಿ ಸಣ್ಣ ಕಾರು ಯೋಜನೆಗೆ ಶಿಫಾರಸ್ಸು ಮಾಡಿದ ಪ್ರಕಾರ ಮೈಸೂರು ರಾಜ್ಯದ ಕೈಗಾರಿಕಾ ಬಂಡವಾಳ ಹೂಡುವಿಕೆ ಮತ್ತು ಅಭಿವೃದ್ಧಿ ನಂಸ್ಥೆ (ಲ) ನವರು ಅವರೇ ಇದನ್ನು ನಡೆಸುತ್ತಾರೋ ಅಥವಾ ಕೊಲಾಬರೇಷನ್‌ನಿಂದ ನಡೆಸುವುದಕ್ಕೆ ನಿರ್ಧಾರ ಮಾಡಿದ್ದಾರೋ ?

1-00 P.M.

ಶ್ರೀ ಎಂ. ರಾಜಶೇಖರ ಮೂರ್ತಿ.—ಕೊಲಾಬರೇಷನ್‌ನಿಂದ ನಡೆಸುವುದಕ್ಕೆ ನಿರ್ಧಾರ ಮಾಡಿದ್ದಾರೆ.

Sri S. R. BOMMAI.—Has the Mysore Government prepared a project report about the small car ?

Sri M. RAJASEKHARA MURTHY.—Yes, we have got a parliamentary report.

Sri H. SIDDAVEERAPPA.—Is it a fact that the Congress President who recently visited Japan has had discussion about this small car factory in Japan and is it also a fact that the Minister as a representative of the Government desired to visit Japan synchronising with the visit of the Congress President in this connection ?

Sri M. RAJASEKHARA MURTHY.—This supplementry does not arise out of the main question.

Sri H. SIDDAVEERAPPA.—I am one with the Industries Minister that the small Car factory must come to Mysore. Has it come to the notice of the Government that only yesterday the Hon'ble the Deputy Prime Minister of India stated in the Congress Office that the small car, scheme should be tabooed from the Mysore State and that he is not in favour of it and if so, what action does the Mysore Government propose to take to counteract it ?

Sri M. RAJASEKHARA MURTHY.—He has not practically closed the doors so far as the small car project is concerned. He said that a small car project could be had when we could afford to have it.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಸಣ್ಣ ಕಾರಿನ ಯೋಜನೆಯನ್ನು ಪ್ರಾರಂಭಿಸುವುದಕ್ಕಾಗಿ 5 ಅರ್ಜಿಗಳು ಬಂದಿದ್ದರಲ್ಲಿ ಮೈಸೂರು ರಾಜ್ಯದ ಕೈಗಾರಿಕಾ ಬಂಡವಾಳ ಹೂಡುವಿಕೆ ಮತ್ತು ಅಭಿವೃದ್ಧಿ ನಂಸ್ಥೆ (ಲ) ನ ಅರ್ಜಿಯನ್ನು ಶಿಫಾರಸ್ಸು ಮಾಡಿದ್ದಾರೆ. ಉಳಿದ 4 ಅರ್ಜಿಗಳು ಯಾರ ಯಾರವು ಅವರುಗಳ ಹೆಸರುಗಳನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಒಟ್ಟು 5 ಅರ್ಜಿಗಳು ಬಂದಿದ್ದರಲ್ಲಿ ಒಂದು ಅರ್ಜಿ ಶಿಫಾರಸ್ಸು ಮಾಡಿದೆ. ಉಳಿದ 4 ಅರ್ಜಿಗಳು ಮಾಡಿಲ್ಲ. ಅವರ ಹೆಸರುಗಳು ಯಾವುವು ಎಂದರೆ :

1 M/s Krishna Automobiles, Hubli.

2 M/s International Industrial Development Bureau, New Delhi with their Belgian Collaboration.

3 Sri E. Doreswamy, Madras, with a Swedish Collaboration.

4 M/s R. Chandok Auto Industries, Bombay-4.

Sri M. S. KRISHNAN.—Is it a fact that the private car manufacturers like Birlas and Walchand Hirachand are coming in the way of such a project in the Public sector and that is why the Mysore State is not able to get the car project ?

Sri M. RAJASEKHARA MURTHY.—I have no information about it.

Sri R. NAGAN GOUDA.— What is likely to be the cost of this small car project ?

Sri M. RAJASEKHARA MURTHY.—The cost of the car with Japanese collaboration is Rs. 6,700 ex-works excluding taxes.

Sri K. H. PATIL.—Will it not be better for the Government to mobilise all its resources to start a fertilizer factory rather than a small car factory ?

Sri M. RAJASEKHARA MURTHY.—Let us try to work for both.

Sri B. P. GANGADHAR.—What will be the total cost involved for starting such a project in the public sector ?

Sri M. RAJASEKHARA MURTHY.—Rs. 35 crores.

Mr. SPEAKER.—The question hour is over.

QUESTIONS FOR ANSWERS ON THE DAY

(But not taken up.)

Engineering and Medical Colleges

98. Sri N. A. CHANNE GOWDA (Pandavapura).—

Will the Minister for Education be pleased to state :—

(*a*) the number of Engineering and Medical Colleges started in the State during the years 1952 and 1968 ;

(*b*) the number of them affiliated to the Mysore, Karntak and the Bangalore University ;

(*c*) the opinion of the Planning Commission and the Regional Technical Education Committee if any in the matter of starting these technical Colleges in the State ?

A.— Sri K. V. SHANKARA GOWDA (Minister for Education).—

(*a*) Nil.

(*b*) Does not arise.

(*c*) Does not arise.